


# ವಿಚಿತ್ರ ಹರಕೆ

ಜಪಾನ್‌ನ ಕೋಯಾ ಪರ್ವತದಡಿಯಲ್ಲಿನ ಕುಡೊಯಾಮಾ ಎಂಬ ಚಿಕ್ಕ ಪಟ್ಟಣದಲ್ಲಿರುವ ಜಿಸನ್ ಇನ್ ದೇಗುಲವು ಜಪಾನ್ ದೇಶದಲ್ಲಿರುವ ಇತರೇ ಹಲವಾರು ಬೌದ್ಧ ಗುಡಿಗಳಂತೆಯೇ ಕಾಣಿಸುತ್ತದೆ. ಕುತೂಹಲದ ವಿಷಯವೇನೆಂದರೆ ಇಲ್ಲಿನ ದೇಗುಲದ ಪ್ರಾಂಗಣದ ಸುತ್ತಲೂ ವಿಚಿತ್ರವಾದ ನೋಟ ಕಾಣಸಿಗುತ್ತದೆ. ಪೂಜ್ಯ ಭಾವನೆಯಿಂದ ದೇವರಿಗೆ ಹರಕೆ ರೂಪದಲ್ಲಿ ಸಲ್ಲಿಸಿರುವ ಸ್ತ್ರೀಯರ ಎದೆಯಾಕಾರದ ವಸ್ತುಗಳು. ಫೋಮ್ ಅನ್ನು ಒಳಗಡೆ ತುಂಬಿ ತೊಟ್ಟಿನ ಜಾಗದಲ್ಲಿ ಮಣಿಗಳನ್ನಿಟ್ಟು ಹೊಲಿದು ತಯಾರಿಸಿದ ಈ ವಸ್ತುಗಳು ಗುಡಿಯ ಸಂಕೀರ್ಣದ ಪ್ರತಿಯೊಂದು ಮೂಲೆಯಲ್ಲೂ ತೂಗು ಹಾಕಿರುವುದನ್ನು ನೋಡಬಹುದು. ಅದರಂತೆ ಮರದಿಂದ ಕೆತ್ತಿ ತಯಾರಿಸಿರುವ ಹಾಗೂ ತೂಗು ಹಲಗೆಯ ಮೇಲೆ ಚಿತ್ರಿಸಿರುವ ಎದೆಗಳನ್ನೂ ಇಲ್ಲಿ ಕಾಣಬಹುದು.

ಈ ದೇವಸ್ಥಾನದ ಅರ್ಚಕ ಅನ್ನಾನ್ ಹೇಳುವ ಪ್ರಕಾರ ಈ ವಿಚಿತ್ರ ಸಂಪ್ರದಾಯ ಪ್ರಾರಂಭವಾಗಿದ್ದು, ಡಾಕ್ಟರ್ ರೊಬ್ಬರು ಸ್ತನ ಕ್ಯಾನ್ಸರ್ ಪೀಡಿತ ರೋಗಿಗೆ ಚಿಕಿತ್ಸೆ ನೀಡುತ್ತಿರುವಾಗ ಆಕೆ ಗುಣ ಹೊಂದಲಿ ಎಂದು ಪ್ರಾರ್ಥಿಸಲು ಇಲ್ಲಿಗೆ  ಬಂದಿದ್ದರಂತೆ. ಎದೆಯ ಚಿಹ್ನೆಯನ್ನು ಹರಕೆ ರೂಪದಲ್ಲಿ ದೇವರಿಗೆ ಅರ್ಪಿಸಬಹುದೇ ಎಂದು ಗುಡಿಯ ಆಡಳಿತ ಮಂಡಳಿಯನ್ನು ಕೇಳಿಕೊಂಡರಂತೆ. ಆಗ ದೇವಸ್ಥಾನದವರು ಇದಕ್ಕೆ ಸಮ್ಮತಿ ನೀಡಿದರಂತೆ. ಈ ವಿಚಿತ್ರ ಕೋರಿಕೆಯು ಎಲ್ಲೆಡೆ ಹರಡಿ ದೇಶ ವಿದೇಶದ ನಾನಾ ಭಾಗದಲ್ಲಿನ ಜನರು ತಮ್ಮ ತಾಯಿ, ಹೆಂಡತಿ, ಮಗಳು ಹಾಗೂ ಸಹೋದರಿಯರಿಗೆ ಬಂದಿರುವ ಎಲ್ಲಾ ರೀತಿಯ ಆರೋಗ್ಯ ಸಮಸ್ಯೆ ಸರಿ ಹೋಗಲೆಂದು  ಪ್ರಾರ್ಥಿಸಲು ಇಲ್ಲಿಗೆ ಬರಲಾರಂಭಿಸಿದರಂತೆ. ಸುಸೂತ್ರ ಹೆರಿಗೆ, ಕ್ಯಾನ್ಸರ್ ನಿಂದ ರಕ್ಷಣೆಯ ಜೊತೆಗೆ ಎದೆ ಹಾಲು ಚೆನ್ನಾಗಿ ಉತ್ಪತ್ತಿಯಾಗಲೂ ಇಲ್ಲಿ ಪ್ರಾರ್ಥನೆ ಸಲ್ಲಿಸಿ ವರ್ಷಗಳ ತರುವಾಯ ಎದೆ ರೂಪದ ಸಾವಿರಾರು ಕಾಣಿಕೆಗಳನ್ನು ಇಲ್ಲಿ ಒಪ್ಪಿಸಿದ್ದಾರಂತೆ. ವಿಶೇಷ ರೂಪದ ಈ ಕಾಣಿಕೆಗಳನ್ನು ಈ ಸ್ಥಳದಲ್ಲಿ ಖರೀದಿಸಬಹುದು. ಇಂದು ಜಿಸನ್ ಇನ್ ದೇಗುಲವು ಕೋಯಾಸಿನ್ ಪರ್ವತ ಯಾತ್ರೆಯನ್ನು ಕೈಗೊಳ್ಳುವವರ ಆರಂಭಿಕ ತಾಣವಾಗಿದೆ.

**■ ವಿನಯ್ ಕುಮಾರ್ ಬಿ.ಹೆಚ್.**

